

ಯಾಡುವ ಪ್ರಾಣಿಗಳಲ್ಲಿ ಗೊಂದಲವನ್ನು ಏರ್ಪಡಿಸಿ ತಾವಿರುವ ಸ್ಥಳ, ತಮ್ಮ ವೇಗ ಮತ್ತು ಚಲಿಸುವ ದಿಕ್ಕನ್ನು ಸುಲಭದಲ್ಲಿ ಪತ್ತೆಹಚ್ಚದಂತೆ ಮಾಡುತ್ತವೆ. ಉದಾಹರಣೆಗೆ ಜೀಬ್ರಾ. ಈ ಜೀಬ್ರಾ ತನ್ನ ಮೈಮೇಲಿನ ಕಪ್ಪು ಬಿಳುಪು ಪಟ್ಟಿಗಳಿಂದಾಗಿ ಸುಲಭದಲ್ಲಿ ಎದ್ದು ಕಾಣುತ್ತದಲ್ಲ ಎಂದುಕೊಳ್ಳಬಹುದು. ಜೀಬ್ರಾ ಸಿಂಹಗಳ ನೆಚ್ಚಿನ ಊಟವೂ ಹೌದು. ಜೀಬ್ರಾಗಳನ್ನು ಹಿಡಿಯಲು ಬೆನ್ನಟ್ಟಿದ ಸಿಂಹ ಚಲಿಸುವ ಕಪ್ಪು ಬಿಳುಪು ಗೆರೆಗಳಿಂದಾಗಿ ಗೊಂದಲಕ್ಕೆ ಒಳಗಾಗುತ್ತದೆ. ಇದರಲ್ಲಿ ಜೀಬ್ರಾ ಯಶಸ್ವಿಯಾಗಬೇಕೆಂದೇನೂ ಇಲ್ಲ. ಆದರೆ ಬದುಕಿ ಉಳಿವ ಅವಕಾಶ ಕೊಂಚ ಹೆಚ್ಚಿರುತ್ತದೆ ಅಷ್ಟೆ.

ಹೂವು ಛದ್ಮವೇಷವೆಂದು ಹಿನ್ನೆಲೆಗೆ ಹೊಂದುವ ಬಣ್ಣ ಹೊಂದಿಸಿ ಕುಳಿತರೆ ಯಾರು ಬಂದಾರು ಅದರ ಬಳಿಗೆ? ಹಾಗಾಗಿಯೆ ಹಸಿರು ಹೂವುಗಳಿರದೆ ಕೆಂಪು, ಬಿಳಿ, ನೀಲಿ ತರತರಹದ ಬಣ್ಣಗಳಿವೆ. ಇದೂ ಕೆಲವೊಮ್ಮೆ ಸಾಕಾಗದೆ ಸುಲಭವಾಗಿ ಎದ್ದು ಕಾಣಲಿ ಎಂದು ಬೆಳ್ಳಿ ಸೊಪ್ಪಿನಂತಹ ಗಿಡಗಳು ಹೂವಿನ ಕೆಳಗಿನ ಕೆಲವು ಎಲೆಗಳಿಗೂ ಬಣ್ಣ ಬಳಿಯುತ್ತದೆ. ಇಲ್ಲಿ ಬಣ್ಣಗಳು ಬಳಕೆಯಾಗುವುದು ಎಚ್ಚರಿಕೆಯ ಸಂಕೇತವಾಗಿ. ವಿಷ ತುಂಬಿದ ಕಪ್ಪೆಗಳು, ಹಲ್ಲಿಗಳು ಇಂಥ ಹೊಳೆವ ಬಣ್ಣವನ್ನು ಹೊಂದಿರುತ್ತವೆ. ಈ ವಿಷ ತೀವ್ರ ಮಟ್ಟದ್ದಾಗಿರುತ್ತದೆ. ಹಕ್ಕಿಗಳು, ಹಾವುಗಳು ಈ ಬಣ್ಣಗಳನ್ನು ಗುರುತು ಹಿಡಿದು ಇವುಗಳ ಬಳಿ ಸುಳಿಯುವುದಿಲ್ಲ. ಈ ವಿದ್ಯಮಾನವನ್ನು 'ಅಪೊಸೆಮಾಟಿಸಮ್' ಎನ್ನುತ್ತಾರೆ.

ನಾನು ನೋಡಿದ್ದ ವೀಡಿಯೊವೊಂದರಲ್ಲಿ ಕಪ್ಪೆಯೊಂದು ವಿಷಯುಕ್ತ ಬಣ್ಣಬಣ್ಣದ ಸಾಲಮಾಂಡರ್‌ನ್ನು ಹಿಡಿದು ನುಂಗಿತು. ಕೆಲವೇ ಕ್ಷಣಗಳಲ್ಲಿ ಕಪ್ಪೆಗೆ ವಿಷವೇರಿ ಸತ್ತು ಕರ್ರಗಾಗಿಬಿಟ್ಟಿತು. ಅದರ ಹೊಟ್ಟೆಯೊಳಗಿಂದ ಬಾಯಿಯ ಮೂಲಕ ಹೊರಬಂದ ಸಾಲಮಾಂಡರ್ ಏನೂ ಆಗೇ ಇಲ್ಲವೆಂಬಂತೆ ಎದ್ದು ನಡೆದು ಹೋಯಿತು.

ಊಸರವಳ್ಳಿ, ಆಕ್ಟೋಪಸ್, ಕೆಲವು ಕಪ್ಪೆಗಳು ತಮ್ಮ ಚರ್ಮದ ಬಣ್ಣವಿನ್ಯಾಸಗಳನ್ನು 'ಕ್ರೊಮಾಟೊಫೋರ್' ಎಂಬ ಕೋಶಗಳ ನೆರವಿನಿಂದ ಬದಲಿಸಿ ಸುತ್ತಲಿನ ಪರಿಸರದೊಡನೆ ಗುರುತಿಸಲಾಧ್ಯ ಎನ್ನುವಷ್ಟರ ಮಟ್ಟಿಗೆ ಅಡಗಿಕೊಳ್ಳುತ್ತವೆ. ಆರ್ಕ್‌ಟಿಕ್ ನರಿ ಬೇಸಗೆಯಲ್ಲಿ ಕಂದು ಬಣ್ಣ ಹೊಂದಿದ್ದು ಚಳಿಗಾಲದಲ್ಲಿ ಬಿಳಿ ಬಣ್ಣಕ್ಕೆ ಮಾರ್ಪಾಟು ಹೊಂದುತ್ತದೆ. ಹಲವು ಹಕ್ಕಿಗಳ ಬಣ್ಣವೂ ಋತುಮಾನಗಳಿಗೆ ಅನುಸಾರವಾಗಿ ಬದಲಾಗುತ್ತವೆ. ಅವೂ ಇದೇ ನಿರ್ದಿಷ್ಟ ಉದ್ದೇಶಕ್ಕಾಗಿ ಬಣ್ಣ ಬದಲಾಯಿಸುತ್ತವೆ ಎಂದು ಹೇಳುವಂತಿಲ್ಲ.

ಯಾವಾಗ ಹಿನ್ನೆಲೆಯು ಇಲ್ಲವಾಗುತ್ತದೋ (ಉದಾ: ನೀರಿನಲ್ಲಿ) ಆಗ ಪಾರದರ್ಶಕತೆ, ಪ್ರತಿಫಲನ ಮತ್ತು ಕೌಂಟರ್ ಶೇಡಿಂಗ್‌ನಂತಹ ತಂತ್ರಗಳು ಮಾತ್ರ ಆಯ್ಕೆಯಾಗಿ ಉಳಿಯುತ್ತವೆ. ಗಾಜಿನ ಕಪ್ಪೆಗಳಂತಹ ನೀರಲ್ಲಿ ತೇಲುವ ಜೀವಿಗಳಿವೆ. ಇಂತಹ ಜೀವಿಗಳು ಸುಮಾರು ಶೇಕಡಾ 50ರಷ್ಟು ಪಾರದರ್ಶಕವಾಗಿದ್ದರೂ ಐನೂರು ಮೀಟರ್ ಆಳದಲ್ಲಿನ ನೀರಲ್ಲಿ ಸುಲಭವಾಗಿ ಬದುಕಬಲ್ಲವು. ಸಮುದ್ರದಲ್ಲಿ ಬೆಳಕನ್ನು ಪ್ರತಿಫಲಿಸುವ, ಸ್ವಯಂಪ್ರಭೆಯುಳ್ಳ ಜೀವಿಗಳೂ ಇವೆ. ಶಾರ್ಕ್‌ಗಳು, ಡಾಲ್ಫಿನ್‌ಗಳು, ಪೆಂಗ್ವಿನ್‌ಗಳು ಕೌಂಟರ್ ಶೇಡಿಂಗ್‌ಅನ್ನು ಅಳವಡಿಸಿಕೊಂಡಿವೆ.

ಡಾರ್ವಿನ್‌ನ ಸ್ವಾಭಾವಿಕ ಆಯ್ಕೆ (ನ್ಯಾಚುರಲ್ ಸೆಲೆಕ್ಷನ್) ಈ ರೀತಿ ವಿವರಿಸುತ್ತದೆ: ಲಕ್ಷಾಂತರ ವರುಷಗಳ ಹಿಂದಿನ ದಟ್ಟಾರಣ್ಯ, ಹುಲ್ಲುಗಾವಲುಗಳಲ್ಲಿ ನಾನಾತರದ ಹುಳಗಳಿದ್ದವು. ಅಲ್ಲೊಂದು ಜಾತಿಯ ಹಸಿರು ಹುಳಗಳು ಮತ್ತು ಅವನ್ನು ಹಿಡಿದು ಬೇಟೆಯಾಡುವ ಹಕ್ಕಿಗಳೂ ಇನ್ನಿತರ ಜೀವಿಗಳೂ ಇದ್ದವು. ನೆಲದಲ್ಲೋ, ರೆಂಬೆಯಲ್ಲೋ ಕುಳಿತ ಹಸಿರು ಹುಳಗಳು ಸುಲಭವಾಗಿ ಬಲಿಯಾದವು. ಹಸಿರು ಹಿನ್ನೆಲೆಯಲ್ಲಿದ್ದ ಹುಳಗಳು ಹೆಚ್ಚಾಗಿ ಉಳಿದುಕೊಂಡವು. ಇದು ತಲೆಮಾರುಗಳ ಕಾಲ ಮುಂದುವರೆದು ಹಸಿರು ಹುಳಗಳ ಇಂದಿನ ಪೀಳಿಗೆ ಛದ್ಮವೇಷವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿವೆ.

### ಸೇನೆಯಲ್ಲಿ ಛದ್ಮವೇಷದ ಬಳಕೆ:

ವಾಹನಗಳು, ಬಂದೂಕುಗಳು, ಸಮವಸ್ತ್ರಗಳು, ಶಿರಸ್ತ್ರಾಣಗಳು, ಮುಖವರ್ಣಿಕೆಗಳಲ್ಲಿ ಛದ್ಮವೇಷದ ತಂತ್ರವನ್ನು ಬಳಸುವುದರ ಮೂಲಕ ಆಕೃತಿಯನ್ನು ಮುರಿಯುತ್ತಾರೆ ಅಥವಾ ಹಿನ್ನೆಲೆಯಲ್ಲಿ ಒಂದಾಗುತ್ತಾರೆ. ಛದ್ಮವೇಷದ ಮೇಲೆಯೇ ಅವಲಂಬಿತವಾಗಲು ಸಾಧ್ಯವಿಲ್ಲವಾದರೂ ಅದೊಂದು ಕಡೆಗಣಿಸಲಾಗದಂತಹ ಅನುಕೂಲತೆ ಎಂದು ಪ್ರಪಂಚದ ಎಲ್ಲ ಸೇನೆಗಳೂ ಒಪ್ಪಿಕೊಂಡಿವೆ. ಸಾಕಷ್ಟು ಅಧ್ಯಯನ ನಡೆಸಿ ಕಂಪ್ಯೂಟರ್ ಮೂಲಕ ಈಗಿನ ಸಮವಸ್ತ್ರವನ್ನು ವಿನ್ಯಾಸಗೊಳಿಸುತ್ತಾರೆ. ಮುಖ್ಯವಾಗಿ ಕಾಡು, ಮರಳುಗಾಡು ಮತ್ತು ನಗರ ಪ್ರದೇಶಗಳಿಗೆಂದು ಅನೇಕ ಬಗೆಯ ಸಮವಸ್ತ್ರಗಳಿರುತ್ತದೆ. ದೂರದಿಂದ ಗುರಿ ಇಡುವ ಸ್ನೈಪರ್‌ಗಳು ತಮ್ಮ ಮೇಲೆ ಪೊದೆಗಳನ್ನು, ಹುಲ್ಲುಗಳನ್ನು ಹಾಕಿ ಹೆಚ್ಚಿನ ಅಲಂಕಾರ ಮಾಡಿಕೊಳ್ಳುತ್ತಾರೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಮತ್ತು ನಂತರ ಯುದ್ಧವಿಮಾನಗಳ ತಳಕ್ಕೆ ಆಗಸದ ನೀಲಬಣ್ಣ ಮತ್ತು ಮೇಲ್ಭಾಗಕ್ಕೆ ನೆಲದ ಕಂದು ಬಣ್ಣ ಬಳಿಯುತ್ತಿದ್ದರು. ಆದರೆ ವಿಮಾನಗಳನ್ನು ಪತ್ತೆಹಚ್ಚುವ ರಾಡಾರ್‌ಗಳು ಬಂದ ಮೇಲೆ ಈ ಬಗೆಯ ಛದ್ಮವೇಷಕ್ಕೆ ಅಷ್ಟು ಮಹತ್ವವಿಲ್ಲದಾಯಿತು.

ಅಮೆರಿಕದಲ್ಲಿ ಯುದ್ಧದ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳ ಕಾರ್ಯಾಗಾರಗಳನ್ನು ಶಾಂತ ಹಳ್ಳಿಗಳಾಗಿ ಕಾಣುವಂತೆ ಮಾರ್ಪಡಿಸುತ್ತಿದ್ದರು. ಜೊತೆಗೆ ಯಾರೂ ಇಲ್ಲದ ಪೇಟೆಗಳನ್ನು , ನಕಲಿ ಸೇತುವೆಗಳನ್ನು, ಯುದ್ಧವಿಮಾನಗಳ ಫ್ಯಾಕ್ಟರಿಯಂತೆ ಕಾಣುವ ಕಟ್ಟಡಗಳನ್ನು ನಿರ್ಮಿಸಿ ಶತ್ರುಪಡೆಯ ಬಾಂಬರ್‌ಗಳ ಕಣ್ಣು ಅವುಗಳ ಮೇಲೆಯೇ ಬೀಳುವಂತೆ ಮಾಡುತ್ತಿದ್ದರು.

ಎಲ್ಲ ಕಾಲದಲ್ಲಿಯೂ ವಾಸ್ತುಶಿಲ್ಪಗಳು ಶಕ್ತಿಸಾಮರ್ಥ್ಯದ ತೋರಿಕೆಗೊಂದು ಅವಕಾಶ ಎಂಬುದನ್ನು ಒಪ್ಪಬಹುದು ವಾಸ್ತುಶಿಲ್ಪಗಳಲ್ಲಿಯೂ ಛದ್ಮವೇಷವನ್ನು ಬಳಸಿದ್ದುಂಟು. ಕೇವಲ ಗೋಡೆಯಂತೆ ಕಾಣುವ ಮನೆಗಳು, ಹೊಂಡಗಳಿರುವಂತೆ ಅಥವಾ ಉಬ್ಬುಗಳಿರುವಂತೆ ಭ್ರಾಂತಿ ಹುಟ್ಟಿಸುವ ನೆಲಗಳು ಹಾಗೂ ಇನ್ನಿತರ ವಿಶೇಷ ಒಳಾಂಗಣ ವಿನ್ಯಾಸಗಳನ್ನು ಕಾಣಬಹುದು. (ದಕ್ಷಿಣ ಕೊರಿಯದಲ್ಲಿ ಕ್ಯಾಮೆರಾ ತಂತ್ರಜ್ಞಾನದ ಮೂಲಕ ಯಾರಿಗೂ ಕಾಣದ ಬಹುಮಹಡಿ ಕಟ್ಟಡವನ್ನು ಕಟ್ಟುವರಂತೆ!)

ನಮ್ಮ ಸ್ವಭಾವಗಳಲ್ಲಿಯೂ ಛದ್ಮವೇಷವನ್ನು ಕಾಣಬಹುದು. ಅದು ಬೇಕೆಂದೇ ಆಗಿರಬಹುದು. ಆಗದಿರಲೂಬಹುದು. ಅಫ್ಘಾನಿಸ್ತಾನದಲ್ಲಿ ಇರಬೇಕಾದ ಅಮೆರಿಕದ ಗೂಢಚಾರನನ್ನು (ಅಲ್ಲಿನವನಾಗಿರದಿದ್ದರೂ) ಅವರಂತೆಯೇ ತಯಾರು ಮಾಡಿ ಕಳುಹಿಸುತ್ತಾರೆ. ಅವರ ಬಣ್ಣ, ಭಾಷೆ, ಬಟ್ಟೆಬರೆ, ಮಾತು ಇತ್ಯಾದಿಗಳನ್ನು ಸತತ ಅಭ್ಯಾಸ ಮಾಡಿ ಕರಗತಗೊಳಿಸಿ ಆ ವಾತಾವರಣದಲ್ಲಿ ಸೇರಿಹೋಗುವಂತೆ ರೂಪಿಸುತ್ತಾರೆ.

ಹೆಚ್ಚಾಗಿ ಒಂದೇ ವಾತಾವರಣದಲ್ಲಿ ಜೀವಿಸುವ ನಾವು ನಮ್ಮದೇ ವಿಶಿಷ್ಟ ಬದುಕಿನ ಶೈಲಿಯನ್ನು ರೂಢಿಸಿಕೊಂಡಿರುತ್ತೇವೆ. ನಮ್ಮದಲ್ಲದ ಪರಿಸರದಲ್ಲಿ ಸುಲಭವಾಗಿ ನಾವೇ ಎದ್ದು ಕಾಣುತ್ತೇವೆ. ನಮ್ಮ ಬಣ್ಣ, ಬಟ್ಟೆ ಮತ್ತು ಹಾವಭಾವಗಳು ಉಳಿದವರಿಗೆ ವಿಚಿತ್ರವಾಗಿ ಕಂಡು ಎದ್ದು ಕಾಣತೊಡಗುತ್ತೇವೆ. ಕೆಲವೊಮ್ಮೆ ಈ ಕಾರಣದಿಂದಲೇ ಸುಲಭವಾಗಿ ಮೋಸ ಹೋಗಿಬಿಡಬಹುದು.

ನಮಗೂ ಒಟ್ಟಿನಲ್ಲಿ ಉಳಿದವರೆಡೆಯಲ್ಲಿ ಎದ್ದು ಕಾಣಬೇಕೆಂಬ ಹಂಬಲ. ಅದಕ್ಕಾಗಿಯೇ ಇನ್ನಿಲ್ಲದ ಕಷ್ಟ ಪಡುವುದುಂಟು. ಪ್ರತಿಯೊಬ್ಬನೂ ಬೇರೆಯಾಗಿ ಕಾಣುವ ಪೈಪೋಟಿಯಲ್ಲಿ ಕೊನೆಗೆ ಎಲ್ಲರೂ ಒಂದೇ ತೆರನಾಗಿಬಿಡುತ್ತಾರೆ! ●